**SET-4**

**Series GBM**

**Code No. 15**

Roll No. | | | | | | | |

Candidates must write the Code on the title page of the answer-book.

- Please check that this question paper contains **13** printed pages.
- Code number given on the right hand side of the question paper should be written on the title page of the answer-book by the candidate.
- Please check that this question paper contains **23** questions.
- **Please write down the Serial Number of the question before attempting it.**
- 15 minute time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the students will read the question paper only and will not write any answer on the answer-book during this period.

# ಕನ್ನಡ

# KANNADA

*ಅನುಮತಿಸಲಾದ ಸಮಯ : 3 ಗಂಟೆ* — *ಗರಿಷ್ಠ ಅಂಕಗಳು : 100*

*Time allowed : 3 hours* — *Maximum Marks : 100*

**ಸೂಚನೆಗಳು :** ಈ ಪ್ರಶ್ನೆ ಪತ್ರಿಕೆಯು *A, B, C* ಮತ್ತು *D* ಎಂಬ ನಾಲ್ಕು ವಿಭಾಗಗಳನ್ನೊಳಗೊಂಡಿದೆ.

| | | |
|---|---|---|
| **ವಿಭಾಗ – A** (ವ್ಯಾಕರಣ) | : | 25 ಅಂಕಗಳು |
| **ವಿಭಾಗ – B** (ಅರ್ಥಗ್ರಹಿಕೆ) | : | 10 ಅಂಕಗಳು |
| **ವಿಭಾಗ – C** (ಬರವಣಿಗೆ) | : | 15 ಅಂಕಗಳು |
| **ವಿಭಾಗ – D** (ಪದ್ಯಗಳ ಅಧ್ಯಯನ) | : | 50 ಅಂಕಗಳು |

## ವಿಭಾಗ – A

## (ವ್ಯಾಕರಣ) : 25 ಅಂಕಗಳು

**1.** ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ :

(ಅ) ಕೆಳಗಿನ ವಾಕ್ಯವನ್ನು ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ : *1*

ಅವರು ಯಥೇಚ್ಛವಾಗಿ ನೀರು ಕುಡಿಯುವ ಅಭ್ಯಾಸ ಮಾಡಿಕೊಂಡರು.

(ಆ) ಕೆಳಗಿನ ವಾಕ್ಯವನ್ನು ನಿಷೇಧಾರ್ಥದಲ್ಲಿ ಬಳಸಿ : *1*

ನಿಶಾ ವಿವಾಹ ಮಾಡಿಕೊಂಡಳು.

(ಇ) ಕೆಳಗಿನ ವಾಕ್ಯವನ್ನು ಸಾಮಾನ್ಯ ವಾಕ್ಯಗಳನ್ನಾಗಿ ಪರಿವರ್ತಿಸಿ : *1*

ಕಾಲುವೆಯಲ್ಲಿ ನೀರು ಬಂದಿದ್ದರಿಂದ ಹೊಲಗದ್ದೆಗಳಿಗೆ ಹರಿಸಲಾಯಿತು.

(ಈ) ಕೆಳಗಿನ ವಾಕ್ಯವನ್ನು ಭೂತ ಕಾಲದಲ್ಲಿ ಬರೆಯಿರಿ : *1*

ಬಾಲಕಿಯೊಬ್ಬಳು ಪೃಥ್ವಿ ಕ್ಷಿಪಣಿಯ ಮಾದರಿ ತಯಾರಿಸುವಳು.

(ಉ) ಕೆಳಗಿನ ವಾಕ್ಯದಲ್ಲಿರುವ ಕ್ರಿಯಾಪದವನ್ನು ಗುರುತಿಸಿ ಅದರ ಧಾತುವನ್ನು ತಿಳಿಸಿ : *1*

ಪುಸ್ತಕ ಮಳಿಗೆಯಲ್ಲಿ ಅನೇಕ ಪುಸ್ತಕಗಳನ್ನು ಕೊಂಡುಕೊಂಡರು.

**2.** ಕೆಳಗಿನ ಗದ್ಯಾಂಶವನ್ನು ಕನ್ನಡಕ್ಕೆ ರೂಪಾಂತರಿಸಿ : *5*

Swachch Bharat Mission or Swachch Bharat Abhiyan is a campaign run by the Government of India as a massive mass movement to initiate the theme of cleanliness all through India. This campaign was launched in seeking the way to create a Clean India target by 2019, 2$^{nd}$ of October, meaning the 150$^{th}$ birthday anniversary of Mahatma Gandhi. The father of the nation, Mahatma Gandhi, had dreamt to make India a clean India and always put his hard efforts towards swachchta in India. This is the reason, why Swachch Bharat Abhiyan was launched on 2$^{nd}$ of October (the birthday of Mahatma Gandhi). To complete the vision of the father of the nation, the Indian government has decided to launch this campaign.

The aim of the mission is to cover all the rural and urban areas of the country to present this country as an ideal country before the world. The mission has targeted aims like eliminating open defecation, converting insanitary toilets into pour flush toilets, eradicating manual scavenging, complete disposal and reuse of solid and liquid wastes, bringing bahavioural changes to people and motivating health practices, spreading cleanliness awareness among people, strengthening the cleanliness systems in the urban and rural areas as well as creating user friendly environment for all private sectors interested for investing in India for cleanliness maintenance.

**3.** ಕೆಳಗಿನ ಯಾವುದಾದರೂ **ಎರಡು** ಪದ್ಯಗಳಿಗೆ ಪ್ರಸ್ತಾರ ಹಾಕಿ, ಗಣ ವಿಂಗಡಣೆ ಮಾಡಿ ಛಂದಸ್ಸಿನ ಹೆಸರು ತಿಳಿಸಿ : $2\frac{1}{2}+2\frac{1}{2}=5$

(ಅ) ಜಸದಟಿ‍ವಂ ಪರಾಭವದ ಪತ್ತುಗೆಯಂ ದೊರೆವೆತ್ತ ತಮ್ಮ ಮಾ

(ಆ) ಕದಡಿದ ಸಲಿಲಂ ತಿಳಿವಂ
ದದೆ ತನ್ನಿಂ ತಾನೆ ತಿಳಿದ ದಶವದನಂಗಾ

(ಇ) ಇನ್ನು ಹುಟ್ಟದೆಯಿರಲಿ ನಾರಿಯ
ರೆನ್ನವೊಲು ಭಂಗಿತರು ಭುವನದೊ
ಳಿನ್ನು ಜನಿಸಲುಬೇಡ ಗಂಡರು ಭೀಮಸನ್ನಿಭರು

(ಈ) ನಂದನದಂತೆ ನೋಳ್ಪರ ಕಣ್ಗಳಿಗಾ
ನಂದವನಿರದೆ ಪುಟ್ಟಿಸುತ

**4.** ಕೆಳಗಿನ ಯಾವುದಾದರೂ **ಎರಡು** ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ : $2\frac{1}{2}+2\frac{1}{2}=5$

(ಅ) ಆಕಳು ಕಪ್ಪಾದರೆ ಹಾಲು ಕಪ್ಪೆ?

(ಆ) ಆಳಾಗಿ ದುಡಿ; ಅರಸಾಗಿ ಉಣ್ಣು.

(ಇ) ಹಾಸಿಗೆ ಇದ್ದಷ್ಟು ಕಾಲು ಚಾಚು.

**5.** ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ :

(ಅ) ಕೆಳಗಿನ ಪದಗಳಿಗೆ ಸಮಾನಾರ್ಥಕ ಪದ ಬರೆಯಿರಿ : $\frac{1}{2}+\frac{1}{2}=1$

(i) ನಾರಿ

(ii) ಸರ್ಪ

**ಅಥವಾ**

ಈ ಪದದ ನಾನಾರ್ಥಗಳನ್ನು ಬರೆಯಿರಿ :

ಮುನಿ

(ಆ) ಈ ಜೋಡು ನುಡಿಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ. *1+1=2*

(i) ಕಾಡು – ಮೇಡು

(ii) ದುಃಖ – ದುಮ್ಮಾನ

**ಅಥವಾ**

ಈ ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ :

(i) ಸಿಂಹಸ್ವಪ್ನ

(ii) ಕಪಿಮುಷ್ಠಿ

(ಇ) ಈ ಪದಗಳನ್ನು ಬಿಡಿಸಿ ಬರೆಯಿರಿ : *1+1=2*

(i) ಆಗದಾಗದು

(ii) ಕೆಲರುಂಡು

**ಅಥವಾ**

ಈ ಪದಗಳಲ್ಲಿನ ಪ್ರತ್ಯಯ ಗುರುತಿಸಿ ವಿಭಕ್ತಿ ಹೆಸರಿಸಿ :

(i) ಭರೆಯೊಳ್

(ii) ರಾಮನಿಂ

## ವಿಭಾಗ – B

## (ಅರ್ಥಗ್ರಹಿಕೆ) : 10 ಅಂಕಗಳು

**6.** ಈ ಗದ್ಯಭಾಗವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :

ಜಗತ್ತಿನ ವಿಸ್ಮಯಗಳಲ್ಲಿ ಅತಿ ವಿಸ್ಮಯಕಾರಿಯಾದದ್ದು ಕಲಿಕೆ. ಪ್ರಾಣಿವರ್ಗದ ಅಸ್ತಿತ್ವಕ್ಕೆ ಇದು ಅತ್ಯಂತ ಅವಶ್ಯಕ. ಮನುಷ್ಯ ಪ್ರಾಣಿಯಲ್ಲಂತೂ ಇದು ಮತ್ತೂ ವಿಶೇಷ. ಚೈತನ್ಯವಿರುವ ಯಾವುದೇ ವಸ್ತು ತನ್ನ ಪರಿಸರದ ಪ್ರಚೋದಕಗಳಿಗೆ ಪ್ರತಿಕ್ರಿಯಿಸುವ ವಿಧಾನದ ಸಂಸ್ಕರಣವನ್ನು ವಿದ್ಯೆ ಎನ್ನಬಹುದು.

ಜೀವಸಂಕುಲದ ನರಮಂಡಲ, ಜೀವನವಿಧಾನ, ಸಮಾಜ ಸಂಕೀರ್ಣಗೊಂಡಂತೆಲ್ಲ ವಿದ್ಯೆಯ ವ್ಯಾಖ್ಯಾನ, ಉದ್ದೇಶ ಮತ್ತು ಸ್ವರೂಪವು ಬದಲಾಗುತ್ತಲೇ ಇರುತ್ತದೆ. ಅದರ ಸ್ಥೂಲರೂಪವೂ ಕಾಲಕ್ಕೆ ತಕ್ಕಂತೆ ಬದಲಾಗುತ್ತಿರುತ್ತದೆ. ಆದರೆ ಅದರ ಸೂಕ್ಷ್ಮ ಅಂತರಂಗವಾಗಲಿ ಅಥವಾ ಮೂಲೋದ್ದೇಶವಾಗಲಿ ಬದಲಾಗುವುದಿಲ್ಲ.

ಭಾರತೀಯ ಪರಂಪರೆಯ ಹಿನ್ನೆಲೆಯಲ್ಲಿ ಪ್ರತಿಯೊಂದನ್ನೂ ಧಾರಣೆ ಮಾಡುವುದು ಧರ್ಮವೇ. ವೃತ್ತಿಧರ್ಮ, ವ್ಯಾಪಾರಧರ್ಮ ವ್ಯವಹಾರಧರ್ಮ ಎಂಬುದೆಲ್ಲ ಬದುಕನ್ನು ಹಸನುಗೊಳಿಸುವ, ಮನುಷ್ಯಪ್ರಾಣಿಯನ್ನು ಸಮಾಜೋಪಯೋಗಿಯೂ ದೇವಸಂಪ್ರೀತನನ್ನಾಗಿಯೂ ಮಾಡುವ ಒಂದು ಕಲೆ ಅದೇ ವಿದ್ಯಾಧರ್ಮ.

ಕಲಿಕೆ ಎಂಬುದು ಕೇವಲ ವಿದ್ಯೆಯಲ್ಲ, ಅದು ಶೀಲ, ಚಾರಿತ್ರ್ಯ, ಬುದ್ಧಿ, ನಡೆತೆಗಳ ಸಂಸ್ಕರಣಕ್ಕೆ ಕಾರಣವಾದಾಗ ಮಾತ್ರ ನಿಜವಾದ ವಿದ್ಯೆ. ವಿದ್ಯಾಭ್ಯಾಸದ ಲಕ್ಷಣವನ್ನು ಅರ್ಥಗರ್ಭಿತವಾಗಿ ಬಹಳ ಸ್ಪಷ್ಟವಾಗಿ ವಿವರಿಸಿದ್ದಾರೆ ಸ್ವಾಮಿ ವಿವೇಕಾನಂದರು: 'ತನ್ನೊಳಗೆ ಅದಾಗಲೇ ಇರುವ ಪರಿಪೂರ್ಣತೆಯ ಅಭಿವ್ಯಕ್ತಿಯೇ ವಿದ್ಯಾಭ್ಯಾಸ' ಎನ್ನುತ್ತಾರೆ ಅವರು.

ಈ ಮಾತುಗಳ ಆಳ-ವಿಸ್ತಾರಗಳು ಸಮಾಜವನ್ನು ತಲುಪಿದಾಗ ಶಿಕ್ಷಣವ್ಯವಸ್ಥೆಯಲ್ಲಿ ನವೋತ್ಸಾಹವನ್ನು ಕಾಣಬಹುದು. ಅಲ್ಲಿಯವರೆಗೆ ವಿದ್ಯೆಯು ವಾರ್ಷಿಕೋತ್ಸವದ ಅಂಕಪಟ್ಟಿಯ ಆರಾಧನೆಯೊಂದಿಗೆ ಮುಗಿಯುತ್ತದೆ. ನಿಜವಾದ ಕಲಿಕೆಯು ಜ್ಞಾನದ ಅರ್ಥ ಸಂಗ್ರಹವಲ್ಲ. ಅದು ಅನುಭಾವದ ಅಂತರ್ಯದ ಬೆಳಕು. ಇದನ್ನು ಡಿವಿಜಿಯವರು 'ವಸ್ತುಸಾಕ್ಷಾತ್ಕಾರವಂತರೀಕ್ಷಣೆಯಿಂದ ಶಾಸ್ತ್ರತನದಿಂದಲ್ಲ' ಎಂದಿದ್ದಾರೆ.

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :**

(ಅ) ನಿಜವಾದ ವಿದ್ಯೆ ಯಾವುದು ? ವಿದ್ಯಾಭ್ಯಾಸದ ಬಗೆಗಿನ ವಿವೇಕಾನಂದರ ವ್ಯಾಖ್ಯೆ ತಿಳಿಸಿ. *2*

(ಆ) ಜಗತ್ತಿನ ವಿಸ್ಮಯಗಳಲ್ಲಿ ಅತಿ ವಿಸ್ಮಯಕಾರಿಯಾದದ್ದು ಯಾವುದು ? *1*

(ಇ) ಸಮಾಜ ಸಂಕೀರ್ಣಗೊಂಡಂತೆಲ್ಲ ಯಾವುದು ಬದಲಾಗುತ್ತಿರುತ್ತದೆ ? *1*

(ಈ) ವಿದ್ಯಾಧರ್ಮ ಎಂದರೇನು ? *2*

**7.** ಕೆಳಗಿನ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ : *4*

ಮಳೆ ಬರಲಿ....
ಆದರೆ
ಹಸಿರು ಹೊಲಗದ್ದೆಗಳನ್ನೂ
ರೈತರ ಸುಖ ನಿದ್ದೆಗಳನ್ನೂ
ಕಸಿದುಕೊಳ್ಳದಿರಲಿ.

ಮಳೆ ಬರಲಿ....
ಆದರೆ
ಹುಲ್ಲಿನ ಛಾವಣಿಗಳನ್ನೂ
ಮಣ್ಣಿನ ಗೋಡೆಗಳನ್ನೂ
ಕೆಡವಿ ಹಾಕದಿರಲಿ.

ಮಳೆ ಬರಲಿ....
ಇರಲೊಂದು ಪುಟ್ಟ ಮನೆ
ಹೊದೆಯಲು ಬೆಚ್ಚನೆಯ
ಕಂಬಳಿ ಎಲ್ಲರಿಗೂ ಸಿಗಲಿ.

ನೊಂದ ಬಯಲುಗಳಿಗೆ
ಬೆಂದ ಬೆಟ್ಟಗಳಿಗೆ
ಬಾಯಾರಿದ ಕೆರೆ ಬಾವಿ
ಹಳ್ಳ ಕೊಳ್ಳಗಳಿಗೆ–
ಬರಲಿ ಮಳೆ ಬರಲಿ.

‘ಧೋ’ ಎಂದು ಸುರಿದು
ಹೊರಟು ನಿಂತಾಗ
ನೆಲ–ಮುಗಿಲು ನಗಲಿ
ಏಳು ಬಣ್ಣಗಳಲ್ಲಿ.

## ವಿಭಾಗ – C

## (ಬರವಣಿಗೆ) : 15 ಅಂಕಗಳು

**8.** ಕೆಳಗಿನವುಗಳಲ್ಲಿ **ಒಂದನ್ನು** ಕುರಿತು ನಿಮ್ಮ ಅನುಭವಗಳನ್ನು ಬರೆಯಿರಿ : *5*

(ಅ) ಶುಭ ಸಮಾರಂಭವೊಂದರಲ್ಲಿ ನೀವು ಭಾಗವಹಿಸಿದಾಗ .....

(ಆ) ನೀವು ಕಂಡ ಕನಸು ನನಸಾದ ಸಂದರ್ಭ .....

**9.** ನಿಮ್ಮ ಊರಿನಲ್ಲಿ ಕುಡಿಯುವ ನೀರಿನ ಸಮರ್ಥಕ ಪೂರೈಕೆ ಇಲ್ಲದ ಕಾರಣ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳನ್ನು ವಿವರಿಸಿ ಪತ್ರಿಕಾ ಸಂಪಾದಕರಿಗೆ ಪತ್ರ ಬರೆಯಿರಿ. *5*

**10.** ಕೆಳಗಿನ ಗದ್ಯ ಭಾಗವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ : *5*

ಜಗತ್ತಿನಾದ್ಯಂತ ಪರಿಸರದ ಮೇಲೆ ಮಾನವ ನಡೆಸಿದ ಅತ್ಯಾಚಾರದ ಸೇಡನ್ನು ಪ್ರಕೃತಿ ತನ್ನದೇ ಆದ ಪ್ರತಿಭಟನೆಯ ಮೂಲಕ ತೋರ್ಪಡಿಸುತ್ತಾ ಬಂದಿದೆ. ಆದರ ನೇರ ಅನುಭವ ನಮ್ಮನ್ನು ತಟ್ಟುವವರೆಗೂ ತಿದ್ದಿಕೊಳ್ಳುವ ಸಣ್ಣ ಆಲೋಚನೆಯೂ ನಮ್ಮತ್ತ ಸುಳಿಯುವುದಿಲ್ಲ. ನಗರಗಳಲ್ಲಿ ನೀರಿನ ಬಾಟಲಿ ಮಾರಾಟ ಪ್ರಾರಂಭವಾದಾಗಲೇ. ಪಂಚಭೂತಗಳಲ್ಲೊಂದಾದ ನೀರು ತನ್ನ ಮೌಲ್ಯವನ್ನು ಹೆಚ್ಚಿಸಿಕೊಳ್ಳುತ್ತಾ ಸಾಗಿತ್ತು.

ದಾರಿಹೋಕ ಅತಿಥಿಗಳನ್ನೂ ನೀರು–ಬೆಲ್ಲ ಕೊಟ್ಟು ಉಪಚರಿಸುವ ಸಂಸ್ಕೃತಿ ಇಟ್ಟುಕೊಂಡಿದ್ದ ಹಳ್ಳಿಮೂಲೆಗಳಲ್ಲೂ ಯಾವಾಗ ನೀರು ಮಾರಾಟದ ಸರಕಾಯಿತೋ ಆಗಲೇ ಅಪಾಯದ ಕರೆಗಂಟೆ ಸಣ್ಣದಾಗಿ ಬಾರಿಸತೊಡಗಿತು. ಈಗ, ಎಲ್ಲೆಲ್ಲೋ ಕೇಳುತ್ತಿದ್ದ ಬರಗಾಲದ ‘ಕೂಗುಮಾರಿ’ ಸಮೃದ್ಧ ಪರಿಸರದ ಸುಖದ ಸುಪ್ಪತ್ತಿಗೆಯಲ್ಲಿ ಉಂಡು ತೇಲುತ್ತಿದ್ದ ಮಲೆನಾಡಿಗರ ಮನೆಬಾಗಿಲಿಗೂ ಬಂದು ನಿಂತಿದೆ.

ಕರ್ನಾಟಕ ಹಿಂದೆಂದೂ ಕಂಡಿರದ ಜಲಕ್ಷಾಮವನ್ನು ಎದುರಿಸಲು ಸಜ್ಜಾಗಬೇಕಿದೆ. 2002 ರಿಂದ 2005 ರವರೆಗೆ ನಾತ್ರ ಅಗತ್ಯ ಪ್ರಮಾಣದ ಮಳೆ ಬಿದ್ದಿದ್ದು ಹೊರತುಪಡಿಸಿದರೆ, ನಂತರದ ವರ್ಷದಿಂದ ವರ್ಷಕ್ಕೆ ಮಳೆಯ ಪ್ರಮಾಣ ಕಡಿಮೆಯಾಗುತ್ತಲೇ ಸಾಗಿ ಅಂತರ್ಜಲ ಮಟ್ಟ ಪಾತಾಳ ಸೇರಿದೆ. ತುಂಬಿ ತುಳುಕಬೇಕಾಗಿದ್ದ ರಾಜ್ಯದ ಹೆಚ್ಚಿನ ಜಲಾಶಯಗಳು ಮಳೆಗಾಲ ಮುಕ್ತಾಯವಾದರೂ ಅರೆಬೆತ್ತಲಾಗಿ ನಿಲ್ಲುವ ಪ್ರತಿವರ್ಷ ನೋಡುತ್ತಿದ್ದೇವೆ.

ಪ್ರತಿವರ್ಷ ಹಿಂಗಾರು ಮಳೆಯ ನಂತರ ಪ್ರಾರಂಭವಾಗುತ್ತಿದ್ದ ಬರಪೀಡಿತ ಪ್ರದೇಶಗಳನ್ನು ಪಟ್ಟಿಮಾಡುವ ಪ್ರಸ್ತಾವ, ಮುಂಗಾರು ಮೋಡಗಳು ಪೂರ್ಣ ಸುರಿಯುವ ಮೊದಲೇ ಕೇಳಿಬರುತ್ತಿದೆ. ಕರ್ನಾಟಕದ ಜೀವನದಿ ಕಾವೇರಿ, ದೇಶದ ಜಲನೀತಿಯ ರಾಜಕೀಯ ದಾಳವಾಗಿ ತಳಸೇರಿ ತೆಳುವಾಗಿದ್ದಾಳೆ.

ಬೆವರು ಸುರಿಸಿ ಹೊಟ್ಟೆತುಂಬಿಕೊಳ್ಳುವ ಬಯಲುಸೀಮೆಯ ಜನರಿಗೆ ಬರ, ನೀರಿನ ಕ್ಷಾಮ ಹೊಸದಲ್ಲ. ಆದರೆ ಹೇರಳ ಜಲಸಂಪತ್ತಿನ ಅಭ್ಯಂಜನದಲ್ಲಿ ಮಿಂದೆದ್ದಿದ್ದ ಮಲೆನಾಡಿಗರಿಗೆ ಅದು ಸುಲಭದ ಮಾತಲ್ಲ. ಪ್ರಕೃತಿಯ ಮುನಿಸನ್ನು ಶಮನ ಮಾಡುವ ಮಾರ್ಗೋಪಾಯಗಳ ಮೇಲೆ ಭವಿಷ್ಯದ ಬದುಕು ಹಸನಾಗಿಸಿಕೊಳ್ಳಬೇಕಾಗಿದೆ.

## ವಿಭಾಗ – D

## (ಪಠ್ಯಗಳ ಅಧ್ಯಯನ) : 50 ಅಂಕಗಳು

## ಗದ್ಯಭಾಗ

**11.** ಒಂದು ವಾಕ್ಯದಲ್ಲಿ ಉತ್ತರಿಸಿ (ನಾಲ್ಕಕ್ಕೆ) : *1×4=4*

(ಅ) ದುರಾಸೆಯ ಹುಡುಗನನ್ನು ನಿರಾಕರಿಸಿದವರು ಯಾರು ?

(ಆ) ಬಸಲಿಂಗನು ಡಾ! ತಿಮ್ಮಪ್ಪನಿಗೆ ಏನೆಂದು ಸುಳ್ಳು ಹೇಳಿದನು ?

(ಇ) ಹೊಳೆ ಯಾವುದಕ್ಕೆ ಹೊಂಚು ಹಾಕುತ್ತಿರುತ್ತದೆ ?

(ಈ) ಭಾವೈಕ್ಯತೆ ಈ ದೇಶದಲ್ಲಿ ಎಲ್ಲಿದೆ ಎಂದು ವೀರೇಂದ್ರ ಸಿಂಪಿಯವರು ಹೇಳುತ್ತಾರೆ ?

(ಉ) ಯಾವ ಕಥೆ ಹೇಳಬೇಕೆಂದು ಮನೋರಮೆ ಕೇಳಿದಳು ?

**12.** ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ (ಎರಡಕ್ಕೆ) : *2×2=4*

(ಅ) ಯಾವ ಉತ್ತರಗಳಿಂದ ಲೇಖಕಿ ನೇಮಿಚಂದ್ರ ಅವರಿಗೆ ತೃಪ್ತಿಯಾಗಲಿಲ್ಲ?

(ಆ) ಧಣಿಯ ಬಡಿತದಿಂದ ಗುಡ್ಡ ಬಂಧಮುಕ್ತನಾದುದು ಹೇಗೆ ?

(ಇ) ಸಿದ್ಲಿಂಗಿ ಏಕೆ ರಾದ್ಧಾಂತ ಮಾಡಿದಳು ?

**13.** ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ (ಒಂದಕ್ಕೆ) : *3×1=3*

(ಅ) 'ದುರಂತದ ಮೂಲ ಬೀಜಗಳು ಚಹಾ ಗಿಡದ ರೂಪದಲ್ಲಿ ಬಂದವು'

(ಆ) ನೀರಿಟೆಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು.

**14.** ಐದಾರು ವಾಕ್ಯಗಳಲ್ಲಿ ಉತ್ತರಿಸಿ (ಒಂದಕ್ಕೆ) : *4×1=4*

(ಅ) ಪೋಷಕರು ಖಾಸಗಿ ಶಾಲೆಗಳ ಕಡೆ ಹೊರಳಲು ಲೇಖಕರು ಯಾವ ಕಾರಣಗಳನ್ನು ಉದಾಹರಿಸುತ್ತಾರೆ ?

(ಆ) ತಾಯಿ, ತಂದೆ, ಶಿಕ್ಷಕರು ಸೇರಿ ಆದ ತ್ರಿಭುಜವೇ ಉತ್ತಮ ಬದುಕಿಗೆ ಆದರ್ಶ ಮಾದರಿ ಹೇಗೆ ?

## ಪದ್ಯಭಾಗ

**15.** ಒಂದು ವಾಕ್ಯದಲ್ಲಿ ಉತ್ತರಿಸಿ (ನಾಲ್ಕಕ್ಕೆ) : *1×4=4*

(ಅ) ಉರಿಲಿಂಗ ಪೆದ್ದಿಯ ವಚನಗಳ ಅಂಕಿತ ಯಾವುದು ?

(ಆ) ಮುದುಕ ಇರುವುದೆಲ್ಲಿ ?

(ಇ) ತೈಲ ತೀರಿದ್ದು ಹೇಗೆ ತಿಳಿಯುತ್ತದೆ ?

(ಈ) ಯಾರ ಕಂಬನಿಯನ್ನೊರೆಸಿ ಜೀಸಸ್ ದಿನನಿತ್ಯ ಶಿಲುಬೆಯೇರಿದ್ದಾನೆ ?

(ಉ) ಮಂದಿ ಮಕ್ಕಳೊಂದಿಗೆ ಹೇಗೆ ಇರಬೇಕು ?

**16.** ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ (ಎರಡಕ್ಕೆ) : *2×2=4*

(ಅ) ಭೀಮನನ್ನು ಹೊರತುಪಡಿಸಿ ಉಳಿದ ನಾಲ್ವರು ಪಾಂಡವರ ಬಗ್ಗೆ ದ್ರೌಪದಿಯ ಅಭಿಪ್ರಾಯವೇನು ?

(ಆ) ದುರ್ಜನರ ಕಾರ್ಯ ಯಾವ ಬಗೆಯದೆಂದು ಪುರಂದರದಾಸರು ಹೇಳಿದ್ದಾರೆ ?

(ಇ) ಮುಂಬೈನ ಮಗುವಿನ ಪಾಲಿಗೆ ತಾಯಿ ಹೇಗಿದ್ದಾಳೆ ?

**17.** ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ (ಒಂದಕ್ಕೆ) : *3×1=3*

(ಅ) ಕದಡಿದ ಸಲಿಲಂ ತಿಳಿವಂದದೆ

(ಆ) ಮುಳುಗಿರಲಿ ಮುಪ್ಪು ಚಿಂತನದಿ

**18.** ಐದಾರು ವಾಕ್ಯಗಳಲ್ಲಿ ಉತ್ತರಿಸಿ (ಒಂದಕ್ಕೆ) : *4×1=4*

(ಅ) ಸಕಾಲಕ್ಕೆ ಒದಗುವ ಸಹಾಯವೇ ಶ್ರೇಷ್ಠ ಎಂಬುದನ್ನು ಸೋಮನಾಥ ಹೇಗೆ ನಿರೂಪಿಸಿದ್ದಾನೆ ?

(ಆ) 'ಒಮ್ಮೆ ನಗುತ್ತೇನೆ' ಕವಿತೆಯಲ್ಲಿ ವ್ಯಕ್ತವಾಗಿರುವ ನಗುವಿನ ವೈಶಿಷ್ಟ್ಯವನ್ನು ವಿವರಿಸಿ.

## ನಾಟಕ

**19.** ಒಂದು ವಾಕ್ಯದಲ್ಲಿ ಉತ್ತರಿಸಿ (ಮೂರಕ್ಕೆ) : *1×3=3*

(ಅ) ಆನೆ ಯಾರ ಅಂಗಡಿಯನ್ನು ದೂಡಿ ಬೀಳಿಸಿತು ?

(ಆ) ನಿರೂಪಕರ ಪ್ರಕಾರ ಮುನ್ಸಿಪಾಲಿಟಿ ಪ್ರೆಸಿಡೆಂಟರ ಕರ್ತವ್ಯ ಯಾವುದು ?

(ಇ) ಆನೆಯ ಮಾವುತನ ಹೆಸರೇನು ?

(ಈ) ಸಾರ್ವಜನಿಕರು ನಾಗರಾಜನ ಸಾವನ್ನು ಕುರಿತು ಏನೆಂದು ಯೋಚಿಸಿದರು ?

**20.** ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ (ಒಂದಕ್ಕೆ) : *2×1=2*

(ಅ) ಅನೆ ಮರ ತಳ್ಳುವ ಬಗೆಯನ್ನು ಲೇಖಕರು ಹೇಗೆ ನಿರೂಪಿಸಿದ್ದಾರೆ ?

(ಆ) ನಿರೂಪಕರು ಕ್ಯಾಲಿಕ್ಯುಲೇಟರಿನಲ್ಲಿ ಲೆಕ್ಕಹಾಕಿ ಜಬ್ಬಾರ್‌ಗೆ ಏನೆಂದರು ?

**21.** ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ (ಒಂದಕ್ಕೆ) : *3×1=3*

(ಅ) ಆನೆ ಸಾಕುವುದು ಎಂದರೆ ಎಲೆಕ್ಷನ್ನಿಗೆ ನಿಂತ ಹಾಗೆ.

(ಆ) ಕೋವಿ ಸಿಕ್ಕಿದೆ, ಆದರೆ ಹೆಣ ಸಿಗಲಿಲ್ಲ.

**22.** ಐದಾರು ವಾಕ್ಯಗಳಲ್ಲಿ ಉತ್ತರಿಸಿ (ಒಂದಕ್ಕೆ) : *4×1=4*

(ಅ) ನಿದ್ರೆ ಮಂಪರಿನಲ್ಲಿದ್ದ ಡ್ರೈವರ್ ಪರಂಧಾಮಕ್ಕೆ ಹೋದ ಸಂದರ್ಭ ವಿವರಿಸಿ.

(ಆ) ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆಯನ್ನು ವಿವರಿಸಿ. ಅದು ಪೇಟೆಯಲ್ಲಿ ಏನು ಮಾಡುತ್ತಿತ್ತು ?

## ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ (ಕವಿ ಕೃತಿ ಹಿನ್ನೆಲೆಯಲ್ಲಿ)

**23.** ಕೆಳಗಿನ ಯಾವುದಾದರೂ **ಇಬ್ಬರು** ಕವಿ–ಕೃತಿ ಪರಿಚಯ ಮಾಡಿಕೊಡಿ : *4×2=8*

(ಅ) ಪುಲಿಗೆರೆ ಸೋಮನಾಥ

(ಆ) ಜನಪದ

(ಇ) ಜಿ.ಎಸ್. ಶಿವರುದ್ರಪ್ಪ

(ಈ) ಹಾ.ಮಾ. ನಾಯಕ